## ಗೊಂದಲಗಳಿಗೆ ಹಿಡಿದ ಕನ್ನಡಿ

‘ದಡ ಸೇರೀತೆ ಕನ್ನಡ ಮಾಧ್ಯಮ ದೋಣಿ’, ಕೋಡಿಬೆಟ್ಟು ರಾಜಲಕ್ಷ್ಮಿ ಅವರ ಮುಖಪುಟ ಲೇಖನ (ಸುಧಾ, ನವೆಂಬರ್ 8) ಪ್ರಸ್ತುತ ಶಿಕ್ಷಣದಲ್ಲಿ ಮಾಧ್ಯಮದ ಬಗ್ಗೆ ಇರುವ ಗೊಂದಲಗಳಿಗೆ ಹಿಡಿದ ಕನ್ನಡಿಯಾಗಿದೆ. ಏನೇ ಆದರೂ ಮಾತೃಭಾಷೆಯಿಂದ ಜ್ಞಾನ ವಿಕಾಸ, ಮನೋವಿಕಾಸ, ಆಗುವುದಲ್ಲದೆ, ಸಂಭಾಷಣೆ ಹಾಗೂ ಸಾಹಿತ್ಯ ಮತ್ತು ಭಾವನೆಗಳ ಹೊರಹೊಮ್ಮುವಿಕೆಗೆ ಮಾತೃಭಾಷೆಯೇ ಉತ್ತಮ ಮಾಧ್ಯಮ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಪಿ. ಗೋವಿಂದರಾಜ್ ಶಿವಮೊಗ್ಗ, ಎಸ್. ಚನ್ನಪ್ಪ, ಮೈಸೂರು

## ಕಾನೂನು ತರಬೇಕು

ಕನ್ನಡ ಶಾಲೆಗಳ ಮತ್ತು ಮಾಧ್ಯಮದ ಆಗುಹೋಗುಗಳ ಬಗ್ಗೆ ವಿಸ್ತೃತವಾಗಿ ತೆರೆದಿಟ್ಟಿದೆ. ಕನ್ನಡ ಮಾಧ್ಯಮ ಶಾಲೆಗಳು ಉದ್ಧಾರವಾಗ ಬೇಕಾದರೆ ಸರ್ಕಾರಿ ಕೆಲಸಗಳು ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಮಾತ್ರ ಸರ್ಕಾರಿ ಅಧಿಕಾರಿಗಳು ಮತ್ತು ಉದ್ಯೋಗಿಗಳ ಮಕ್ಕಳು ಕಡ್ಡಾಯವಾಗಿ ಸರ್ಕಾರಿ ಶಾಲೆಯಲ್ಲೇ ಓದಬೇಕು ಎನ್ನುವ ಕಾನೂನು ತರಬೇಕು. ಅಲ್ಲದೆ ಕನ್ನಡ ಅನ್ನ ಕೊಡುವ ಭಾಷೆಯಾಗಬೇಕು. ನಾನು ಸಹ ಕನ್ನಡ ಮಾಧ್ಯಮ ಶಾಲೆಯಲ್ಲೇ ಓದಿ ಇಂದು ಡಿ.ಆರ್. ಡಿ.ಓ.ದಲ್ಲಿ ಗೆಜೆಟೆಡ್ ಆಫೀಸರ್ ಆಗಿದ್ದೇನೆ ಮತ್ತು ನನ್ನ ಮಕ್ಕಳು ಸಹ ಸರ್ಕಾರಿ ಶಾಲೆಯಲ್ಲಿಯೇ ಓದುತ್ತಿದ್ದಾರೆ.

–ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

## ಸಂಗ್ರಹಯೋಗ್ಯ ಸಂಚಿಕೆ

ಮುಖಪುಟದಲ್ಲಿರುವ ಚಿತ್ರದಿಂದ ಹಿಡಿದು ಒಳಪುಟದ ಎಲ್ಲ ಲೇಖನಗಳೂ ಕನ್ನಡ ಕಂಪನ್ನು ಪಸರಿಸಿದ ರೀತಿಯಿಂದ ಸಂಚಿಕೆ ತುಂಬಾ ಮೆಚ್ಚುಗೆಯಾಯಿತು. ಸಂಗ್ರಹಯೋಗ್ಯ ಸಂಚಿಕೆ.

–ಶಕುಂತಲ ರೆಡ್ಡಿ, ರಾಯಾಪುರ

## ಗುರುಗಳ ನೆನಪು

‘ನಮ್ಮ ಕಾಲದ ಕನ್ನಡ ಸಾಲಿ ಮಾಸ್ತರುಗಳು’ (ಡಾ. ನಾಗರಾಜ ಶೆಣೈ) ಲೇಖನ ಏಳು ದಶಕಗಳ ಹಿಂದಿನ ಶಾಲಾ ಜೀವನವನ್ನು ಮತ್ತೆ ಸ್ಮರಿಸಿದಂತಾಯಿತು. ಉಪಾಧ್ಯಾಯರು ಶಾಲೆಯ ಒಳಗೂ ಹೊರಗೂ ಗುರುಗಳೇ ಆಗಿರುತ್ತಿದ್ದರು. ಪ್ರತಿ ವಿದ್ಯಾರ್ಥಿಯ ತಂದೆ ಹಾಗೂ ಕುಟುಂಬ ಸದಸ್ಯರ ವಿವರಗಳೂ ಅವರಿಗೆ ತಿಳಿದಿರುತ್ತಿದ್ದವು. ಅವರು ಆಶೀರ್ವದಿಸಿ ನೀಡಿದ ಕೈಗಳು ಹಾಗೂ ಹೊಡೆತಗಳನ್ನು ಸ್ವೀಕರಿಸಿ ಧನ್ಯರಾಗುತ್ತಿದ್ದೆವು.

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

## ಮಾದರಿ ಮಾಸ್ತರುಗಳು

ಅಂದಿನ ಸಮಾಜದ ‘ಸ್ಕೂಲು ಮಾಸ್ಟರ್’ ಬಿ.ಆರ್. ಪಂತಲುರವರ ನಟನೆ, ನಿರ್ದೇಶನ,




ನಿರ್ಮಾಣ ಹಂಚಿಕೆದಾರರು ಕೈಚೆಲ್ಲಿದಾಗ, ತಾವೇ ಹಂಚಿಕೆ ಮಾಡಿ ದಾಖಲೆ ಮಟ್ಟದ ‘ದಿಗ್ವಿಜಯ’ ಸಾಧಿಸಿದರು. ಇವರಿಗೆ ಸಾಥ್ ನೀಡಿದವರು ಎಂ.ವಿ. ರಾಜಮ್ಮ. ಇವರ ಜೋಡಿ ಕರ್ನಾಟಕದ ಮನೆ ಮಾತು. ಚಿತ್ರದಲ್ಲಿ ಹಳ್ಳಿ ಮಾಸ್ತರರ ಜೀವನ, ಪೋಷಾಕು ಶಾಲೆ ನಡೆಸುವ ರೀತಿ, ಮಕ್ಕಳಿಗೆ ನವ ಉತ್ಸಾಹ ತುಂಬಿ ಶಾಲಾ ಪ್ರಾರ್ಥನೆ, ರಾಜ್ಯದಾದ್ಯಂತ ಶಾಲಾ ಪ್ರಾರ್ಥನೆಯಾಗಿ ಬದಲಾದದ್ದು. ತಮಿಳು ಚಿತ್ರನಟ ಶಿವಾಜಿ ಗಣೇಶನ್ ಒಂದು ಪಾತ್ರ ಮಾಡಿ ಮೆರಗು ಕೊಟ್ಟರು. ರಾಷ್ಟ್ರಪ್ರಶಸ್ತಿ ಮುಡಿಗೇರಿಸಿಕೊಂಡಿದ್ದು ಇತಿಹಾಸ. ‘ಅಂದಿನ ಚಿತ್ರ’ ಇಂದಿನವರಿಗೆ ಬಿಚ್ಚಿಕೊಟ್ಟವರು ಲೇಖಕರಾದ ನಾಗರಾಜ ಶೆಣೈ.

–ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

## ಸೊಗಸಾದ ಲೇಖನ

‘ನವ ಬ್ರಹ್ಮ ಮಂದಿರಗಳ ಆಲಂಪುರ’ (ಗೀತಾ ಕುಂದಾಪುರ) ಲೇಖನ ಸೊಗಸಾಗಿದೆ. ಇಲ್ಲಿರುವ ಹೆಚ್ಚಿನ ದೇವಾಲಯಗಳ ಶಿಖರ ಗೋಪುರ ಐಹೊಳೆ, ಪಟ್ಟದಕಲ್ಲಿನ ಲಾಡ್‌ಖಾನ್ ಮತ್ತು ದುರ್ಗಾ ದೇವಾಲಯಗಳ ವಾಸ್ತುಶಿಲ್ಪದಿಂದ ಕೂಡಿರುವುದಲ್ಲದೆ, ವಿನ್ಯಾಸಗಳಲ್ಲೂ ವ್ಯತ್ಯಾಸವಿಲ್ಲ. ಓದುಗರು ಬಾದಾಮಿ ಚಾಲುಕ್ಯರ ಬಾದಾಮಿ ಆಸುಪಾಸು ನಡೆದಾಡಿದಂತಾಯಿತು. ಇಲ್ಲಿಯ ಶಕ್ತಿಪೀಠ (ಜೋಗುಳಾಂಬಿ) ಕಲ್ಕತ್ತಾ ಕಾಳಿಮಾತೆಯಂತೆ ಪ್ರಸಿದ್ಧಿ ಪಡೆದಿರುವುದು ಸುಳ್ಳಲ್ಲ.

–ಕೊಹಿಮ, ಬಸರಕೋಡು

## ಸಕಾಲಿಕ ಬರಹ

‘ನಿಮ್ಮೊಡನೆ’ಯಲ್ಲಿ ‘ಇಂಗ್ಲಿಷ್ ಮಾಧ್ಯಮವೆಂಬ ಸರ್ಕಾರಿ ಭ್ರಮೆ’ ಬರಹ (ರಘುನಾಥ ಚ.ಹ) ಸಕಾಲಿಕ. ರಾಜ್ಯೋತ್ಸವದ ಈ ಸಂದರ್ಭದಲ್ಲಿ ಲೇಖನ ಪ್ರಶ್ನಾವಳಿಗಳ ಹುತ್ತ ಬಿತ್ತಿತ್ತು. ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮಗಳ ಶುರು ಮಾಡುವುದರ ಬದಲಿಗೆ ಇನ್ನೊಂದು ಇಂಗ್ಲಿಷ್ ಉಪ ಪುಸ್ತಕವನ್ನಾದರೂ ನೀಡಲಿ ಹಾಗೆ ಬೋಧಿಸಲಿ. ಕನ್ನಡ ಪರಿಸರ, ಕನ್ನಡ ಜಾಗೃತಿ ಜೊತೆ ಜೊತೆಯಾಗಿ ಇಂಗ್ಲಿಷ್ ಭಾಷೆ ನಲಿದಾಡಿದರೆ ಚೆಂದ. ಇದನ್ನು ಸರ್ಕಾರವಾಗಲಿ, ಪಾಲಕ ಪೋಷಕ ವೃಂದದವರಾಗಲಿ ಅನುಸರಣೆ ಮಾಡಬೇಕು.

–ಹೆಚ್. ಆನಂದಕುಮಾರ್, ಚಿತ್ರದುರ್ಗ
ಅರವಿಂದ ಜಿ.ಜೋಷಿ, ಮೈಸೂರು

## ಮಮ್ಮಿಗಳ ಬಗ್ಗೆ ವಿವರ

ಪ್ರವಾಸ ಅಂಕಣದಲ್ಲಿ ಕೈರೋ ಮ್ಯೂಸಿಯಂ (ಡಿ.ಜಿ. ಮಲ್ಲಿಕಾರ್ಜುನ) ಲೇಖನದಲ್ಲಿ ಒಂದು ಶತಮಾನಕ್ಕೂ ಹಳೆಯದಾದ ಮ್ಯೂಸಿಯಂ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಮ್ಯೂಸಿಯಂನ ಒಳಗೊಂದು ಮಮ್ಮಿಗಳ ಮರಿ ಮ್ಯೂಸಿಯಂ ಇದೆ. ಮಮ್ಮಿ ಎಂಬುದು ಅರೇಬಿಕ್ ಭಾಷೆಯಲ್ಲಿ ‘ಮಮ್ಮಿಯಾ’. ಎಂದರೆ ಮಧ್ಯ ಪ್ರಾಚ್ಯ ಪರ್ವತಗಳಲ್ಲಿ ಕಂಡು ಬರುವ ಒಂದು ಬಗೆಯ ಕಪ್ಪು ಖನಿಜ. ಶವಗಳು ಕಪ್ಪಾಗಿದ್ದುದರಿಂದ ಸಂಸ್ಕರಿಸಿಟ್ಟ ಮೃತ ದೇಹಗಳನ್ನು ಮಮ್ಮಿ ಎಂದು ಕರೆಯುವ ರೂಢಿಯಾಯಿತು. ಮಮ್ಮಿಗಳ ಬಗ್ಗೆ ಬಹಳಷ್ಟು ಮಾಹಿತಿ ತಿಳಿದಂತಾಯಿತು.

–ವಿ. ಹೇಮಂತಕುಮಾರ, ಬೆಂಗಳೂರು

## ಅಚ್ಚರಿ

‘ವಂಡರ್‌ಪುಟ’ದಲ್ಲಿ ‘ಆಹಾ... ನೈದಿಲೆಗಳ ಕೊಳ’ (ವಿದ್ಯಾ ವಿ. ಹಾಲಭಾವಿ) ಚಿತ್ರ ಬರಹ ಆಕರ್ಷಕವಾಗಿದೆ. ಥಾಯ್ಲೆಂಡ್‌ನಲ್ಲಿರುವ ಈ ಸರೋವರ ಸುಮಾರು ಎಂಟು ಸಾವಿರ (8000) ಎಕರೆ ಜಾಗವನ್ನು ಆವರಿಸಿಕೊಂಡಿರುವುದು ತಿಳಿದು ಅಚ್ಚರಿಯಾಯಿತು. ‘ಪಿಂಕ್’ (ನಸುಗೆಂಪು) ಬಣ್ಣದ ಈ ಸರೋವರ ನೋಡಲೂ ಅಂದ.

–ನಾರಾಯಣ ಯಾಜಿ ಶಿರಾಲಿ

## ಉಪಯುಕ್ತ ಲೇಖನ

ಆರೋಗ್ಯ ಅಂಕಣದಲ್ಲಿ ‘ಗರ್ಭಾವಸ್ಥೆ ಬಾಣಂತನದ ಮನೋ ರೋಗಕ್ಕೂ ಮದ್ದುಂಟು!’ (ಡಾ.ಕೆ.ಎಸ್. ಶುಭ್ರತಾ) ಲೇಖನ ಪ್ರತಿಯೊಬ್ಬ ಮಹಿಳೆಯೂ ಓದಿ ತಿಳಿದುಕೊಳ್ಳುವ ಉಪಯುಕ್ತ ಬರಹ. ಗರ್ಭಿಣಿ ಹಾಗೂ ಬಾಣಂತಿಯರನ್ನು ಕಾಡುವ ಮಾನಸಿಕ ಸಮಸ್ಯೆಗಳು, ಇದರ ಚಿಕಿತ್ಸೆ ಬಗ್ಗೆ ವಿವರಿಸಲಾಗಿದೆ.

–ಪ್ರಾರ್ಥನಾ ಹೇಮಂತಕುಮಾರ, ಬೆಂಗಳೂರು

## ಕಥೆ ಮಾರ್ಮಿಕ

ಕಥೆ ‘ಬಾಲ’ (ಬೆಳಗೋಡು ರಮೇಶ್ ಭಟ್) ಹನುಮದ್ವಿಲಾಸ ಮನಮೋಹಕವಾಗಿತ್ತು. ಇಲ್ಲೇ ಎಲ್ಲೋ ಕಣ್ಣೆದುರು ನಡೆದ ಘಟನೆಯಂತೆ ಸರಳವಾಗಿ ಜೊತೆಗೆ ಅಷ್ಟೇ ತನ್ಮಯತೆಯಿಂದ ನಿರೂಪಿಸಿದ್ದು ಕಥೆಯ ಹೆಗ್ಗಳಿಕೆ.

–ಶ್ರೀರಂಜನಿ, ಬೆಂಗಳೂರು, ರಮಾಮಣಿ. ಮೈಸೂರು, ಬಸವರಾಜ. ಗಣಪ್ಪನವರ, ಬೆಟಗೇರಿ